# ನಿನ್ನೊಡನೆ

## ಲೈಂಗಿಕ ಕಿರುಕುಳಕ್ಕೆ ತಡೆ

**ಕಾರ್ಖಾನೆಗಳಲ್ಲಿ, ಕಚೇರಿಗಳಲ್ಲಿ ಹೆಣ್ಣುಮಕ್ಕಳು ಕೆಲಸ ಮಾಡುವಾಗ ಲೈಂಗಿಕ ಕಿರುಕುಳದ ಸಾಧ್ಯತೆ ಹೆಚ್ಚು. ಒಂದು ಸಮೀಕ್ಷೆಯ ಪ್ರಕಾರ 35ಕ್ಕಿಂತ ಕಡಿಮೆ ವಯಸ್ಸಿನ ದುಡಿಯುವ ಹೆಣ್ಣುಮಕ್ಕಳಲ್ಲಿ ಐವರಲ್ಲಿ ಒಬ್ಬರು ಮ್ಯಾನೇಜರ್‌ನ ಅಥವಾ ಸಹೋದ್ಯೋಗಿಯ ದೈಹಿಕ ಹಲ್ಲೆಗೆ, ಕಿರುಕುಳಕ್ಕೆ ಒಳಗಾಗುತ್ತಿದ್ದಾರೆ.**

'ಲೈಂಗಿಕ ಕಿರುಕುಳ ಎನ್ನುವುದು ಮಾನವ ಹಕ್ಕುಗಳ ಉಲ್ಲಂಘನೆ' ಎಂದು ಸುಪ್ರೀಂಕೋರ್ಟ್ ತೀರ್ಪು ನೀಡಿದ್ದು 1997ರ ಆಗಸ್ಟ್‌ನಲ್ಲಿ. ದುಡಿಯುವ ಸ್ಥಳಗಳಲ್ಲಿ ಹೆಣ್ಣುಮಕ್ಕಳ ರಕ್ಷಣೆಯ ದೃಷ್ಟಿಯಿಂದ ಇದೊಂದು ಕ್ರಾಂತಿಕಾರಿ ತೀರ್ಪು ಎಂದೇ ಆಗ ಬಣ್ಣಿಸಲಾಗಿತ್ತು. ಆದರೆ ಈ ನಿಟ್ಟಿನಲ್ಲಿ ಸಮಗ್ರ ಕಾನೂನೊಂದು ರೂಪುಗೊಳ್ಳಲು 15 ವರ್ಷಗಳ ಸುದೀರ್ಘ ಅವಧಿ ತಗುಲಿದೆ. ಕೊನೆಗೂ ಇದೀಗ ಲೋಕಸಭೆಯಲ್ಲಿ 'ದುಡಿಯುವ ಸ್ಥಳದಲ್ಲಿ ಮಹಿಳೆಯರ ಲೈಂಗಿಕ ಕಿರುಕುಳ (ತಡೆ, ನಿಷೇಧ ಮತ್ತು ಪರಿಹಾರ) 2010' ಮಸೂದೆಗೆ ಅಂಗೀಕಾರ ದೊರಕಿದೆ. ಇನ್ನು ಆ ಮಸೂದೆ ರಾಜ್ಯಸಭೆಯ ಒಪ್ಪಿಗೆ ಪಡೆದ ಬಳಿಕ ಕಾನೂನಾಗಲಿದೆ.

ಅಸಂಘಟಿತ ಕಾರ್ಮಿಕರು, ವಿದ್ಯಾರ್ಥಿಗಳು ಮತ್ತು ರೋಗಿಗಳು ಕೂಡಾ ಈ ಕಾಯ್ದೆ ವ್ಯಾಪ್ತಿಗೆ ಬರುತ್ತಾರೆ. 2010ರಲ್ಲಿ ಈ ಮಸೂದೆಯನ್ನು ಮಂಡಿಸಿದಾಗ ಕಸಮುಸುರೆ ತಿಕ್ಕುವ, ಬಟ್ಟೆ ಒಗೆಯುವುದೇ ಮುಂತಾದ ಮನೆಕೆಲಸಗಳನ್ನು ಮಾಡುವ ಮಹಿಳೆಯರು ಈ ಮಸೂದೆಯಲ್ಲಿ ಸೇರ್ಪಡೆಯಾಗಿರಲಿಲ್ಲ. ಒಂದು ಅಂದಾಜಿನ ಪ್ರಕಾರ, ದೇಶದಲ್ಲಿ ಮನೆಕೆಲಸ ಮಾಡುವ ಮಹಿಳೆಯರ ಸಂಖ್ಯೆ 47.5 ಲಕ್ಷ! ದೇಶದಲ್ಲಿ ದುಡಿಯುವ ಹೆಣ್ಣುಮಕ್ಕಳ ಪೈಕಿ ಮನೆಕೆಲಸ ಮಾಡುವವರ ಪ್ರಮಾಣ ಶೇಕಡಾ 30ರಷ್ಟಿದೆ ಎನ್ನುವುದು ಸರಕಾರವೇ ನೀಡಿರುವ ಅಂಕಿ ಅಂಶ. ಇದು ನೋಂದಣಿ ಮಾಡಿಸಿರುವ ಮಹಿಳೆಯರ ಲೆಕ್ಕ. ನೋಂದಣಿ ಮಾಡದೆ, ಹಾಗೆಯೇ ಮನೆಕೆಲಸಗಳಲ್ಲಿ ತೊಡಗಿರುವವರ ಸಂಖ್ಯೆ ಹಳ್ಳಿ ಹಾಗೂ ಸಣ್ಣ ನಗರಗಳಲ್ಲಿ ಇನ್ನಷ್ಟು ಇರಬಹುದು. ಏನಿದ್ದರೂ ಸಾಕಷ್ಟು ಚರ್ಚೆಯ ಬಳಿಕ ಈ ಮಸೂದೆಯ ವ್ಯಾಪ್ತಿಗೆ ಮನೆಕೆಲಸ ಮಾಡುವ ಮಹಿಳೆಯರನ್ನೂ ಸೇರಿಸಿರುವುದು ಸ್ವಾಗತಾರ್ಹ.

ಎಷ್ಟೋ ಕಡೆ ಮನೆಕೆಲಸ ಮಾಡುವ ಹೆಣ್ಣುಮಕ್ಕಳಿಗೆ ಸಂಬಳ ನೀಡದೆ, ಕೇವಲ ಅಳಿದುಳಿದ ಆಹಾರ ಸಾಮಗ್ರಿಗಳನ್ನು, ಒಂದಿಷ್ಟು ಬಟ್ಟೆ ಬರೆಗಳನ್ನು ಮಾತ್ರ ಕೊಟ್ಟು ದುಡಿಸಿಕೊಳ್ಳುವ ಪದ್ಧತಿ ಇದೆ. ಮನೆಕೆಲಸದ ಹಾಗೂ ಲೈಂಗಿಕ ಕಿರುಕುಳದ ಸ್ವರೂಪದ ಬಗ್ಗೆ ಈ ಮಸೂದೆಯಲ್ಲಿ ವಿವರವಾಗಿ ನಮೂದಿಸಲಾಗಿದೆ. ಯಾವುದೇ ಮನೆಯಲ್ಲಿ ಮನೆಕೆಲಸಕ್ಕೆ ಆಹಾರ ಮತ್ತಿತರ ವಸ್ತುಗಳನ್ನಷ್ಟೇ ಪ್ರತಿಫಲವಾಗಿ ಪಡೆಯುವವರೂ ಈ ಕಾಯ್ದೆಯಡಿ ಬರುತ್ತಾರೆ. ಹಾಗೆಯೇ ನೇರವಾಗಿ ಅಥವಾ ಏಜೆನ್ಸಿಯ ಮೂಲಕ ಮನೆಕೆಲಸಕ್ಕೆ ಸೇರಿದವರೂ, ಪರ್ಮನೆಂಟ್, ಪಾರ್ಟ್‌ಟೈಮ್ ಸ್ವರೂಪದಲ್ಲಿ ಮನೆಕೆಲಸಕ್ಕೆ ಸೇರಿದವರಿಗೂ ಈ ಕಾನೂನಿನ ರಕ್ಷಣೆ ಇದೆ. ಆದರೆ ಮನೆಯಲ್ಲಿ ಕುಟುಂಬದ ಸದಸ್ಯರು ಮನೆಕೆಲಸ ಮಾಡಿದರೆ ಈ ಕಾನೂನು ವ್ಯಾಪ್ತಿಗೆ ಸೇರುವುದಿಲ್ಲ.

ಕಾರ್ಖಾನೆಗಳಲ್ಲಿ, ಕಚೇರಿಗಳಲ್ಲಿ ಹೆಣ್ಣುಮಕ್ಕಳು ಕೆಲಸ ಮಾಡುವಾಗ ಲೈಂಗಿಕ ಕಿರುಕುಳದ ಸಾಧ್ಯತೆ ಹೆಚ್ಚು. ಒಂದು ಸಮೀಕ್ಷೆಯ ಪ್ರಕಾರ 35ಕ್ಕಿಂತ ಕಡಿಮೆ ವಯಸ್ಸಿನ ದುಡಿಯುವ ಹೆಣ್ಣುಮಕ್ಕಳಲ್ಲಿ ಐವರಲ್ಲಿ ಒಬ್ಬರು ಮ್ಯಾನೇಜರ್‌ನ ಅಥವಾ ಸಹೋದ್ಯೋಗಿಯ ದೈಹಿಕ ಹಲ್ಲೆಗೆ, ಕಿರುಕುಳಕ್ಕೆ ಒಳಗಾಗುತ್ತಿದ್ದಾರೆ. ಬಹಳಷ್ಟು ಕಡೆ ಇಂತಹ ಸಂದರ್ಭಗಳಲ್ಲಿ ಕೆಲಸ ಕಳೆದುಕೊಳ್ಳುವ ಭೀತಿಯಿಂದ ಮಹಿಳೆಯರು ದೂರು ನೀಡಲು ಹಿಂಜರಿಯುತ್ತಾರೆ. ದೂರು ನೀಡಿದರೂ ಮಹಿಳೆಯ ಮೇಲೆಯೇ ಅನುಮಾನ ಪಡುವವರ ಸಂಖ್ಯೆ ಹೆಚ್ಚು. ಈವರೆಗೆ ಇದನ್ನು ತಡೆಯುವ ನಿಟ್ಟಿನಲ್ಲಿ ಸ್ಪಷ್ಟ ಕಾನೂನು ಬೆಂಬಲವೂ ಇರಲಿಲ್ಲ. ಈಗ ಲೋಕಸಭೆಯಲ್ಲಿ ಅಂಗೀಕಾರವಾಗಿರುವ ಮಸೂದೆಯ ಪ್ರಕಾರ, 10 ಅಥವಾ ಅದಕ್ಕಿಂತ ಹೆಚ್ಚು ನೌಕರರು ಇರುವ ಸಂಸ್ಥೆಗಳಲ್ಲಿ ಆಂತರಿಕ ದೂರು ಸಮಿತಿಯನ್ನು ನೇಮಿಸುವುದು ಕಡ್ಡಾಯ. ಈ ನಿಯಮ ಪಾಲಿಸದ ಮಾಲೀಕನಿಗೆ ಮೊದಲ ಸಲಕ್ಕೆ 50 ಸಾವಿರ ರೂಪಾಯಿವರೆಗೆ ದಂಡ ವಿಧಿಸಬಹುದು. ಮತ್ತೆ ಮತ್ತೆ ಕಾನೂನನ್ನು ಉಲ್ಲಂಘಿಸಿದರೆ ಇನ್ನಷ್ಟು ಕಠಿಣ ಶಿಕ್ಷೆ ವಿಧಿಸಬಹುದು.

ಕಂಪೆನಿಗಳಲ್ಲಿ ದುಡಿಯುವ ಮಹಿಳೆಯರು ಮಾತ್ರವಲ್ಲ, ಸಂಸ್ಥೆಗೆ ಬರುವ ಗ್ರಾಹಕರು, ಗಿರಾಕಿಗಳು, ಅಪ್ರೆಂಟಿಸ್‌ಗಳು ಮತ್ತು ದಿನಗೂಲಿ ನೌಕರರೂ ಈ ಕಾಯ್ದೆಯ ರಕ್ಷಣೆ ಪಡೆಯುತ್ತಾರೆ ಎನ್ನುವುದು ಮಹತ್ವದ ಸಂಗತಿ. ಲೈಂಗಿಕತೆಗೆ ಸಂಬಂಧಿಸಿದ ಟೀಕೆಗಳನ್ನು ಮಾಡಿದರೂ, ಅಸಹಜ ಸ್ಪರ್ಶ ನಡೆಸಿದರೂ ಅಥವಾ ಅಶ್ಲೀಲ ಚಿತ್ರ ತೋರಿಸಿದರೂ ಈ ಕಾಯ್ದೆಯನ್ವಯ ಅದನ್ನು ಲೈಂಗಿಕ ಕಿರುಕುಳ ಎಂದೇ ಪರಿಗಣಿಸಲಾಗುವುದು. ಮಹಿಳೆಯರು ಈ ಕಾನೂನನ್ನು ದುರುಪಯೋಗ ಮಾಡಿಕೊಳ್ಳದಂತೆ, ಸುಳ್ಳು ದೂರು ನೀಡುವ ಮಹಿಳೆಯರಿಗೆ ಶಿಕ್ಷೆ ವಿಧಿಸುವ ಪ್ರಸ್ತಾಪವೂ ಮಸೂದೆಯಲ್ಲಿದೆ. ಪುರುಷಪ್ರಧಾನ ಹಾಗೂ ಸ್ತ್ರೀ ಕುರಿತು ಪೂರ್ವಾಗ್ರಹಗಳೇ ಹೆಚ್ಚಿರುವ ನಮ್ಮ ವಿಷಮ ಸಮಾಜದಲ್ಲಿ, ಈ ಕಾಯ್ದೆ ಸಾಕಷ್ಟು ದೂರಗಾಮಿ ಪರಿಣಾಮ ಬೀರಲಿದೆ. ಕಾನೂನಿನ ಭಯದಿಂದಲೇ ಸಾಕಷ್ಟು ಪ್ರಮಾಣದಲ್ಲಿ ಲೈಂಗಿಕ ಕಿರುಕುಳ ಕಡಿಮೆಯೂ ಆಗಲಿದೆ.

■ ಬಿ.ಎಂ.ಹನೀಫ್

